# ವಿದ್ಯುಚ್ಛಕ್ತಿ ಲೋಕಪಾಲರ ಸಮಕ್ಷಮದಲ್ಲಿ

ಸಂಖ್ಯೆ: 16, ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, (ಜೈನ್ ಆಸ್ಪತ್ರೆ ಹಿಂಭಾಗ),
ವಸಂತನಗರ, ಬೆಂಗಳೂರು–560052.

**ಉಪಸ್ಥಿತಿ: ಶ್ರೀಮತಿ ಆರ್. ಶಾರದ,**
**ವಿದ್ಯುಚ್ಛಕ್ತಿ ಲೋಕಪಾಲರು**

**ಪ್ರಕರಣ ಸಂಖ್ಯೆ: OMB/B/G-425/2021**

**ಆದೇಶ ದಿನಾಂಕ: 31.08.2021**

ಮೆ। ಯುರೇಖಾ ಫೋರ್ಬ್ಸ್ ಲಿಮಿಟೆಡ್,
ಸಂಖ್ಯೆ 143, ಸಿ–4,
ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ,
ಆಫ್ ಹೊಸೂರ್ ರೋಡ್,
ಆನೇಕಲ್ ತಾಲ್ಲೂಕು,
ಬೆಂಗಳೂರು – 560099.

**ಪ್ರತಿನಿಧಿಸುವವರು:**
ಮೆ। ಶಿವದಾಸ್ ಅಂಡ್ ಶಿವದಾಸ್
(ಲಾ ಚೇಂಬರ್ಸ್), ವಕೀಲರು,
#501, ಲೇವಲ್ 5, ಪ್ರೆಸ್ಟೀಜ್ ಸೇಂಟರ್ ಪಾಂಟ್,
ಸಂಖ್ಯೆ 7, ಕನ್ನಿಂಗ್‌ಹಾಮ್ ರೋಡ್,
ಬೆಂಗಳೂರು – 560052. – ದೂರುದಾರರು/ಮೇಲ್ಮನವಿದಾರರು

V/S

1. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ,
ಕಾವೇರಿ ಭವನ, ಕೆ.ಜಿ. ರಸ್ತೆ,
ಬೆಂಗಳೂರು – 560009.

2. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ),
ಕಾರ್ಯ ಮತ್ತು ಪಾಲನ ಚಂದಾಪುರ ಉಪ ವಿಭಾಗ, ಬೆಸ್ಕಾಂ,
ಚಂದಾಪುರ ಪಟ್ಟಣ,
ಬೆಂಗಳೂರು – 560099. – ಪ್ರತಿವಾದಿಗಳು

ಈ ಮೇಲ್ಮನವಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ (ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಮತ್ತು ಲೋಕಪಾಲ) ನಿಯಮಗಳ

ಅಡಿಯಲ್ಲಿ, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ಬೆಂಗಳೂರು ನಗರ, ಪ್ರಕರಣ ಸಂಖ್ಯೆ: CGRF 42/2016–17, ಆದೇಶ ಸಂಖ್ಯೆ: CP/CGRF/BU/BWC/7075-77, ಇವರ ಆದೇಶ ದಿನಾಂಕ 03.03.2021ರ (Annexure-I), ವಿರುದ್ಧ ದಾಖಲಿಸಲಾಗಿದೆ.

1) ಈ ಪ್ರಕರಣದ ಸಾರಾಂಶವೇನೆಂದರೆ, ದೂರುದಾರ/ಅಪೀಲುದಾರ ಪಬ್ಲಿಕ್ ಲಿಮಿಟೆಡ್ ಕಂಪನಿಯಾಗಿದ್ದು ತೆಲಂಗಾಣ ರಾಜ್ಯ ಹೈದ್ರಾಬಾದ್ ನಗರದಲ್ಲಿ ಮುಖ್ಯ ಕಛೇರಿಯನ್ನು ಹೊಂದಿರುತ್ತದೆಂದು, ತದನಂತರ ದಿನಾಂಕ 05.02.1996ರಂದು ದೂರುದಾರರು ಹಾಗೂ KIADBರವರ ನಡುವೆ ಉಂಟಾದ ಕ್ರಯ ಒಪ್ಪಂದದ ಪ್ರಕಾರ ಬೆಂಗಳೂರು ನಗರ ಆನೇಕಲ್ಲು ತಾಲ್ಲೂಖಿನ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ C-4, 143ನಲ್ಲಿರುವ M/s. Eureka Forbes Limited ಹೆಸರಿನ ಕಂಪನಿಯನ್ನು ನಡೆಸುತ್ತಿರುತ್ತಾರೆಂದು, ಪ್ರತಿವಾದಿಗಳಿಂದ ತಮ್ಮ ಸ್ಥಾವರಕ್ಕೆ 1998ರ ಸಾಲಿನಲ್ಲಿ 500 KVA ವಿದ್ಯುತ್ ಭಾರವನ್ನು ಪಡೆದುಕೊಂಡಿದ್ದರೆಂದು. ಈ ಸ್ಥಾವರದ RR No. AKLHT 184 ಆಗಿರುತ್ತದೆ ಎಂದಾಗಿರುತ್ತದೆ. ಮತ್ತೆ ಮುಂದುವರೆದು ದೂರುದಾರರು ತಮ್ಮ ಅಪೀಲಿನಲ್ಲಿ ಆಗಸ್ಟ್ 2008ರಲ್ಲಿ ಹೆಚ್ಚುವರಿಯಾಗಿ 750 KVA ವಿದ್ಯುತ್ ಭಾರವನ್ನು ಒಂದನೇ ಪ್ರತಿವಾದಿಯಿಂದ ಪಡೆದುಕೊಂಡಿದ್ದರೆಂದೂ, ಅಂದರೆ ಒಟ್ಟಾರೆ 1250 KVA ವಿದ್ಯುತ್ ಭಾರವನ್ನು ಪಡೆದುಕೊಂಡುದ್ದರೆಂದು ಕಂಡು ಬರುತ್ತದೆ. ಇದಾದ ಮೇಲೆ ಮಾರ್ಚ್ ತಿಂಗಳು 2016ನಲ್ಲಿ ದೂರುದಾರರು ತಾವು ಈಗಾಗಲೇ ಪಡೆದುಕೊಂಡಿದ್ದ 1250 KVA ವಿದ್ಯುತ್ ಭಾರವನ್ನು ಕಡಿತಗೊಳಿಸಿ ಕೇವಲ 100 KVA ವಿದ್ಯುತ್ ಭಾರವನ್ನು ತಮ್ಮ ಸ್ಥಾವರಕ್ಕೆ ಉಳಿಸಿಕೊಳ್ಳಲು ನಿರ್ಧಸಿದ್ದು ಅದಕ್ಕಾಗಿ

ದಿನಾಂಕ 02.03.2016ರಂದು ಒಂದನೇ ಪ್ರತಿವಾದಿಗೆ ಅರ್ಜಿಯನ್ನು ಕೂಡ ಕೊಟ್ಟಿದ್ದರೆಂದೂ ಸದರಿ ಅರ್ಜಿಯನ್ನು ಪರಿಶೀಲಿಸಿ ಒಂದನೇ ಪ್ರತಿವಾದಿಯು ದಿನಾಂಕ 27.09.2017ರ ಪತ್ರದ ಮೂಲಕ ದೂರದಾರರು ಕೋರಿದಂತೆ ವಿದ್ಯುತ್ ಭಾರವನ್ನು 1250 KVA ನಿಂದ 100 KVAಗೆ ಕಡಿತಗೊಳಿಸಲು ಅನುಮತಿ ನೀಡಿದ್ದರೆಂದು ಕಂಡುಬರುತ್ತದೆ. ಈ ರೀತಿ ಕಡಿತಗೊಳಿಸಿದ ನಂತರ Clause 34.02 of the Conditions of Supply of Electricity of Distributions Licensees in the State of Karnataka ಪ್ರಕಾರ ಗ್ರಾಹಕರ ಬೇಡಿಕೆಗೆ ಅನುಮೋದನೆ ದೊರೆತ ಎರಡು ತಿಂಗಳಲ್ಲಿ ಹೆಚ್ಚುವರಿ ಸೆಕ್ಯೂರಿಟಿ ಡೆಪಾಸಿಟ್ (Security Deposit) ಹಣವನ್ನು ಗ್ರಾಹಕರಿಗೆ ವಾಪಸ್ಸು ಮಾಡಬೇಕಾಗಿರುತ್ತದೆಂದು ಆ ರೀತಿ ಮಾಡದೇ ಹೋದಲ್ಲಿ ವಾಪಸ್ಸು ಮಾಡಬೇಕಾದ ಹಣಕ್ಕೆ ತಿಂಗಳಿಗೆ ಶೇ. 1%ರಷ್ಟು ಬಡ್ಡಿಯನ್ನು ಸೇರಿಸಿ ಗ್ರಾಹಕರಿಗೆ ಮರುಪಾವತಿ ಮಾಡಬೇಕಾಗಿರುತ್ತದೆ ಎಂಬುದಾಗಿ ನುಡಿದಿರುತ್ತಾರೆ. ಅದರಂತೆ ಒಂದನೇ ಪ್ರತಿವಾದಿಯು ಹಲವಾರು ಪತ್ರಗಳ ಮೂಲಕ ದೂರುದಾರರಿಗೆ ಕೋರಿಕೆ ಸಲ್ಲಿಸುತ್ತಾ ಡೆಪಾಸಿಟ್ (Deposit) ಹಣವನ್ನು ವಾಪಸ್ಸು ಮಾಡಲು ಬೇಕಾದ ಮೂಲ ರಸೀದಿಗಳನ್ನು, ಒಂದು ವೇಳೆ ಅಂತಹ ರಸೀದಿಗಳು ಲಭ್ಯವಿಲ್ಲದಿದ್ದಲ್ಲೀ ರಸೀದಿ ಸಂಖ್ಯೆಗಳನ್ನು ನಮೂದಿಸಿದಂತಹ ಒಂದು ಇನ್‌ಡೆಮ್ನಿಟಿ ಬಾಂಡ್‌ನ್ನು (Indemnity Bond) ಒಂದನೇ ಪ್ರತಿವಾದಿಗೆ ನೀಡುವಂತೆ ಸೂಚನೆಯನ್ನು ಕೊಡಲಾಗಿತ್ತು, ಅದರಂತೆ ದೂರುದಾರರು ದಿನಾಂಕ 21.05.2018ರಂದು ಒಂದನೇ ಪ್ರತಿವಾದಿಯ ಹೆಸರಿಗೆ ಇನ್‌ಡೆಮ್ನಿಟಿ ಬಾಂಡ್‌ನ್ನು (Indemnity Bond) ಬರೆದು ಕೊಟ್ಟಿರುತ್ತಾರೆಂದು, ಇದಾದ ಮೇಲೆಯೂ ಕೂಡ ಒಂದನೇ ಪ್ರತಿವಾದಿಯಿಂದ ದೂರುದಾರರಿಗೆ ಯಾವುದೇ ಮಾಹಿತಿ

ದೊರೆಯದೇ ಇದ್ದ ಕಾರಣ ಈ ಬಗ್ಗೆ ಒಂದು ದೂರನ್ನು ಗ್ರಾಹಕರ ಕುಂದುಕೊರತೆಗಳ ನೀವಾರಣಾ ವೇದಿಕೆಯ ಮುಂದೆ ಸಲ್ಲಿಸಿದ್ದು ಅದರ ಸಂಖ್ಯೆ CGRF 42/2016-17 ಆಗಿರುತ್ತದೆ. ಸದರಿ ಗ್ರಾಹಕರ ವೇದಿಕೆಯು ದಿನಾಂಕ 13.06.2019ರಂದು ಆದೇಶವನ್ನು ಹೊರಡಿಸುತ್ತಾ ಸದರಿ ಆದೇಶದ ದಿನಾಂಕದಿಂದ ಎರಡು ವಾರಗಳ ಒಳಗಾಗಿ ಹೆಚ್ಚುವರಿ ಡೆಪಾಸಿಟ್ (Deposit) ಹಣವಾದ 47,56,840/-ಗಳನ್ನು ಗ್ರಾಹಕರಿಗೆ ವಾಪಸ್ಸು ಮಾಡಲು ಆದೇಶಿಸಿರುತ್ತದೆಂದು, ಆದರೆ ಎದುರುದಾರರು ಸದರಿ ಆದೇಶದ ಪಾಲನೆ ಮಾಡದೇ ಹೋದಕಾರಣ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆಯು ದಿನಾಂಕ 18.10.2019ರಂದು ಮತ್ತೊಂದು ಮಧ್ಯಂತರ ಆದೇಶವನ್ನು ಹೊರಡಿಸಿ ಆ ಮೂಲಕ ವಿದ್ಯುತ್ ಕಾಯ್ದೆ ಕಲಂ 146 ಅಡಿಯಲ್ಲಿ ಪ್ರತಿವಾದಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ KERCರವರಿಗೆ ನಿರ್ದೇಶನ ನೀಡಿರುತ್ತದೆ. ಇದರ ಪರಿಣಾಮವಾಗಿ KERCರವರು ದಿನಾಂಕ 16.02.2021ರ ಆದೇಶದ ಅನ್ವಯ ಗ್ರಾಹಕರು ವಿದ್ಯುಚ್ಛಕ್ತಿ ಲೋಕಪಾಲರ ಮುಂದೆ ಅಪೀಲು ಸಲ್ಲಿಸಬೇಕೆಂದು ನಿರ್ದೇಶನ ನೀಡಿದ ಮೇರೆಗೆ ಮೇಲ್ಮನವಿದಾರರು ಪ್ರಸ್ತುತ ಅಪೀಲನ್ನು ಈ ಕೆಳಕಂಡ ಕಾರಣಗಳಿಗಾಗಿ ಸಲ್ಲಿಸಿರುತ್ತಾರೆ.

## ಕಾರಣಗಳು

2) ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯು ಆದೇಶವನ್ನು ನೀಡುವಾಗ Clause 34.04 of the Conditions of Supply of Electricity of Distributions Licensees in the State of Karnataka ಇದರಲ್ಲಿರುವ ದತ್ತಾಂಶಗಳನ್ನು ಪರಿಶೀಲಿಸಿಲ್ಲವೆಂದು, Clause 34.04 ಪ್ರಕಾರ ವಿದ್ಯುತ್ ಭಾರವನ್ನು ಕಡಿತಗೊಳಿಸಿದ್ದಲ್ಲಿ ಈಗಾಗಲೇ ಡಿಪಾಸಿಟ್ (Deposit) ಮಾಡಲಾದ ಹಣದಲ್ಲಿ

ಹೆಚ್ಚುವರಿ ಡೆಪಾಸಿಟ್ (Deposit) ಹಣವನ್ನು ಅನುಮೋದನೆಯಾದ ದಿನಾಂಕದಿಂದ 2 ತಿಂಗಳೊಳಗೆ ಗ್ರಾಹಕರಿಗೆ ವಾಪಸ್ ಮಾಡಬೇಕೆಂದು, ತಪ್ಪಿದ್ದಲ್ಲಿ ಮಾಸಿಕ ಶೇಕಡ 1% ರಷ್ಟು ಬಡ್ಡಿಯನ್ನು ಸೇರಿಸಿ ಹಣವನ್ನು ವಾಪಸ್ ಮಾಡಬೇಕಾಗಿರುತ್ತದೆ ಎಂದಾಗಿರುತ್ತದೆ. ಆದರೇ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆಯು ಈ ಯಾವುದೇ ಅಂಶಗಳನ್ನು ಪರಿಶೀಲನೆ ಮಾಡಿಯೇ ಇಲ್ಲವೆಂದು ಡೆಪಾಸಿಟ್ (Deposit) ಹಣವನ್ನು ಹಿಂದಿರುಗಿಸುವುದರಲ್ಲಿ ಉಂಟಾದ ಕಾಲ ವಿಳಂಬಕ್ಕೆ ನಿಯಮಾನುಸಾರ ಬಡ್ಡಿ ದರವನ್ನು ನಿಗಧಿಪಡಿಸಿಲ್ಲವೆಂದು ಅಷ್ಟೇ ಅಲ್ಲದೇ ಗ್ರಾಹಕರು ಉಳಿಸಿಕೊಂಡಂತಹ 100 KVA ವಿದ್ಯುತ್ ಭಾರಕ್ಕೆ ಅನುಗುಣವಾಗಿ 3,49,297/- ಹಣವನ್ನು ಡೆಪಾಸಿಟ್ (Deposit) ಮಾಡಬೇಕಾಗಿ ತದನಂತರ ರೂ. 47,56,840/- ಹಣವನ್ನು ವಾಪಸ್ಸು ಮಾಡುವುದಾಗಿ ಹೇಳಿರುತ್ತದೆಂದು, ಆದರೆ ಈ ರೀತಿ ಹೇಳಿರುವುದು ನ್ಯಾಯ ಸಮ್ಮತ ಅಲ್ಲವೆಂದು ಎದುರುದಾರರು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆಯ ಆದೇಶವನ್ನು ಪಾಲಿಸದೇ ನ್ಯಾಯಾಂಗ ನಿಂದನೆ ಮಾಡಿರುತ್ತಾರೆಂದು ಆದ್ದರಿಂದ ಈ ಬಗ್ಗೆ ಕೂಡ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮತ್ತು ಅಪೀಲನ್ನು ಪುರಸ್ಕರಿಸಿ ಅಪೀಲಿನಲ್ಲಿ ಕೋರಿದಂತೆ ಆದೇಶ ಮಾಡಿಕೊಡಬೇಕು ಎಂಬುದಾಗಿ ಪ್ರಾರ್ಥನೆ ಮಾಡಿಕೊಂಡಿರುವುದು ಕಂಡು ಬರುತ್ತದೆ.

3) ಈ ಪ್ರಾಧಿಕಾರದಿಂದ ಪ್ರತಿವಾದಿಗಳಿಗೆ ನೋಟಿಸ್ ನೀಡಲಾಗಿರುತ್ತದೆ. ಎರಡನೇ ಪ್ರತಿವಾದಿಯು ಖುದ್ದಾಗಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುತ್ತಾರೆ ಮತ್ತು ಲಿಖಿತ ತಕರಾರು ಸಲ್ಲಿಸಿರುತ್ತಾರೆ. ಸದರಿ ತಕರಾರಿನ ಪ್ರಕಾರ ಗ್ರಾಹಕರು ಸಮುಚಿತ ಮಾರ್ಗದಲ್ಲಿ ಹೊರೆ ಕಡಿಮೆ ಮಾಡಿದ ದಿನಾಂಕಕ್ಕೆ ಅನುಗುಣವಾಗಿ ಯಾವುದೇ ದಾಖಲಾತಿಗಳನ್ನು ತಮ್ಮ ಉಪವಿಭಾಗಕ್ಕೆ ಸಲ್ಲಿಸಿರುವುದಿಲ್ಲವೆಂದು ಸದರಿಯವರು ಕಾಲಕಾಲಕ್ಕೆ ಒದಗಿಸಿದ

ದಾಖಲೆಗಳ ಅನುಗುಣವಾಗಿ ಅನುಮೋದನೆ ದೊರೆತಿರುತ್ತದೆಂದು 04.01.2018ರ ಪತ್ರದ ಮೂಲಕವೇ ಗ್ರಾಹಕರಿಗೆ ಅನುಮೋದನೆಯಾದ ಪ್ರಕಾರ ಅನುಸರಿಸಬೇಕಾದ ತಾಂತ್ರಿಕ ಕ್ರಮಗಳ ಬಗ್ಗೆ ತಿಳಿಸಿಕೊಡಲಾಗಿರುತ್ತದೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ಗ್ರಾಹಕರು ಒಂದನೇ ಪ್ರತಿವಾದಿಯಿಂದ ವಿದ್ಯುತ್ ಸಂಪರ್ಕವನ್ನು ಪಡೆಯುವ ಸಂದರ್ಭದಲ್ಲಿ KERC ಮತ್ತು BESCOM ನಿಯಮಗಳಿಗೆ ಅನುಗುಣವಾಗಿ ಬದ್ಧರಾಗಿರುವುದಾಗಿ ತಿಳಿಸಿ ಕರಾರು ಪತ್ರಕ್ಕೆ ಸಹಿ ಮಾಡಿರುತ್ತಾರೆಂದು ಈ ನಿಯಮಗಳ ಅನ್ವಯ ಒಂದನೇ ಪ್ರತಿವಾದಿಯವರು ಹೊರೆಯನ್ನು ಕಡಿತಗೊಳಿಸಲು ಅನುಮೋದನೆ ನೀಡಿರುತ್ತದೆ ಎಂದು ಈ ರೀತಿ ಅನುಮೋದನೇ ಕೊಡುವಾಗಲೇ ಗ್ರಾಹಕರಿಗೆ KERC ರೆಗ್ಯೂಲೇಶನ್ ಪ್ರಕಾರ ಎರಡು ತಿಂಗಳಲ್ಲಿ ಅವರಿಗೆ ಹೊರೆ ಕಡಿಮೆಗೊಳಿಸಿ ದಿನಾಂಕ 07.03.2018ರಂದೇ ನಿಗಧಿತ ಶುಲ್ಕವನ್ನು ಕಡಿಮೆ ಮಾಡಲಾಗಿರುತ್ತದೆಂದು ಗ್ರಾಹಕರು ಸಮುಚಿತ ಮಾರ್ಗದಲ್ಲಿ ಇಲಾಖೆಯ ಹಣ ಕಟ್ಟಿರುವ ರಸೀದಿಗಳನ್ನು ಒಂದನೇ ಪ್ರತಿವಾದಿಗೆ ಸಲ್ಲಿಸಿದ್ದರೆ. ದಿನಾಂಕ 07.03.2018ರಂದೇ ಹಣವನ್ನು ಹಿಂದಿರುಗಿಸಲು ಒಂದನೇ ಪ್ರತಿವಾದಿಯು ಬದ್ಧವಾಗಿತ್ತೆಂದು ಆದರೆ ಗ್ರಾಹಕರು ಯಾವುದೇ ರಸೀದಿಗಳನ್ನು ಒದಗಿಸಿಲ್ಲವೆಂದು ಮತ್ತು ಆ ರೀತಿ ರಸೀದಿಗಳು ಇಲ್ಲದೇ ಇರುವ ಬಗ್ಗೆ ಯಾವುದೇ ಇಂಡೆಮ್ನಿಟಿ ಬಾಂಡ್ (Indemnity Bond) ಬರೆದು ಕೊಟ್ಟಿಲ್ಲವೆಂದು, ಸದರಿ ಗ್ರಾಹಕರು KERC ನಿಯಮಾನುಸಾರ ಹಾಗೂ ಅಕೌಂಟ್ಸ್ ಕೈಪಿಡಿ ಪ್ರಕಾರ ರಸೀದಿಗಳನ್ನು ಒದಗಿಸದಿದ್ದಲ್ಲಿ ಅವರು ಎಷ್ಟು ಮೊತ್ತವನ್ನು ಪಡೆಯಬೇಕೆಂಬ ಲೆಕ್ಕಾಚಾರ ಇರುವುದಿಲ್ಲವೆಂದು ಅಷ್ಟೇ ಅಲ್ಲದೆ ರಸೀದಿ ಇಲ್ಲದಂತಹ ಸಂದರ್ಭಗಳನ್ನು ಒಂದನೇ ಪ್ರತಿವಾದಿಯು ಸಹ ಉಪಯೋಗಿಸಿಕೊಂಡು ಕಡಿಮೆ ಹಣ ಕೊಡುವ ಸಾಧ್ಯತೆ ಕೂಡ ಇರುತ್ತದೆಂದು ನುಡಿದಿರುತ್ತಾರೆ ಮತ್ತೆ ಮುಂದುವರೆದು ದಿನಾಂಕ 24.05.2018ರಂದು

ಗ್ರಾಹಕರು ಇಂಡೆಮ್ನಿಟಿ ಬಾಂಡ್‌ನ್ನು (Indemnity Bond) ಕೊಟ್ಟಿರುತ್ತಾರೆಂದು ಆದರೇ ಅದರಲ್ಲಿ ತಪ್ಪು ಲೆಕ್ಕಾಚಾರ ತೋರಿಸಿರುತ್ತಾರೆಂದು ಆದ ಕಾರಣ ಅವರಿಗೆ ಮೊತ್ತವನ್ನು ಪಾವತಿ ಮಾಡಿಲ್ಲವೆಂದು ನುಡಿದಿರುತ್ತಾರೆ ಮತ್ತೆ ಮುಂದುವರೆದು ದಿನಾಂಕ 25.08.2020ರಂದು ಗ್ರಾಹಕರು ಮತ್ತೊಂದು ಇಂಡೆಮ್ನಿಟಿ ಬಾಂಡ್‌ನ್ನು (Indemnity Bond) ಸಲ್ಲಿಸಿರುತ್ತಾರೆಂದು ಅದರಲ್ಲಿ ಇರುವಂತಹ ಆರು (6) ರಸೀದಿಗಳು ಸರಿಯಾಗಿರುತ್ತದೆಂದು ಅದರಂತೆ ಗ್ರಾಹಕರಿಗೆ ರೂ. 47,56,840/- ಹಣವನ್ನು ಹಿಂದಿರುಗಿಸಬೇಕಾಗಿರುತ್ತದೆಂದು, ಈ ಮೊತ್ತವು ದೊಡ್ಡದಾಗಿದ್ದ ಕಾರಣ ಕೆಳಗಿನ ಎಲ್ಲಾ ಕಛೇರಿಗಳ ವ್ಯಾಪ್ತಿಯನ್ನು ಮೀರಿರುತ್ತದೆಂದು ಆದ್ದರಿಂದ ಕೇಂದ್ರ ಕಛೇರಿಯಲ್ಲಿ ಆಂತರಿಕ ಪರೀಶೋದನೆಗೆ ಒಳಪಡಿಸಿ ಕೊಡಬೇಕಾಗಿರುತ್ತದೆಂದು ಅದರಂತೆ ಕಂಪನಿಯ ಎಲ್ಲಾ ಪರೀಶೋಧನೆಗೆ ಒಳಪಡಿಸಿ ಹಾಲಿ ಇರುವ 100 KVA ಹೊರೆಯ ಮೊತ್ತವನ್ನು ಪಾವತಿಸಿಕೊಳ್ಳಲು ತಿಳಿಸಿ ಅನುಮೋದನೆ ನೀಡಿರುತ್ತಾರೆಂದು ಇದರ ಅನ್ವಯ ಗ್ರಾಹಕರು 17.07.2020ರಂದು ಮೊತ್ತವನ್ನು ಪಾವತಿ ಮಾಡಿರುತ್ತಾರೆಂದು, ಈ ಎಲ್ಲಾ ಕ್ರಮಗಳನ್ನು ಇಲಾಖೆಯ ಅಧಿಕಾರಿಗಳು ಪಾಲಿಸಬೇಕಾಗಿರುತ್ತದೆಂದು ಇದರಲ್ಲಿ ಒಂದನೇ ಪ್ರತಿವಾದಿಯ ಕಡೆಯಿಂದ ಯಾವುದೇ ಕಾಲ ವಿಳಂಬ ಉಂಟಾಗಿಲ್ಲವೆಂದು ಅಷ್ಟೇ ಅಲ್ಲದೆ ಗ್ರಾಹಕರು ಹಿಂಬಾಕಿ ಮೊತ್ತವನ್ನು ಪ್ರಶ್ನಿಸಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆಂದು. ಈಗಲೂ ಕೂಡ ವಾದಿ ಕಂಪನಿಯು ರೂ. 12,55,48,700ಗಳಷ್ಟು ಹಣ ಬಾಕಿ ಉಳಿಸಿಕೊಂಡಿರುತ್ತದೆಂದು ಈ ರೀತಿ ಬಾಕಿ ಇರುವುದರಿಂದ ಅಪೀಲುದಾರರಿಗೆ ಠೇವಣಿ ಮೊತ್ತ ಹಿಂದಿರುಗಿಸುವುದರಲ್ಲಿ ಎಲ್ಲಾ ಹಿರಿಯ ಅಧಿಕಾರಿಗಳ ಅನುಮತಿ ಬೇಕಾಗಿರುತ್ತದೆಂದು ಅದೂ ಅಲ್ಲದೆ ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣದಿಂದ ಕಛೇರಿಯಲ್ಲಿ ಸಿಬ್ಬಂಧಿಯ ಕೊರತೆ ಇತ್ತೆಂದು ಅನುಮೋದನೆ

ಕೊಡಬೇಕಾದ ಅಧಿಕಾರಿಗಳು ಹಾಗೂ ನೌಕರ ವರ್ಗದವರು ಕೋವಿಡ್–19 ರೋಗಕ್ಕೆ ಬಲಿಯಾಗಿದ್ದರೆಂದು ಈ ಎಲ್ಲಾ ಕಾರಣಗಳಿಂದ ತಡವಾಗಿ ಗ್ರಾಹಕರಿಗೆ ಹಣವನ್ನು ಹಿಂದಿರುಗಿಸಬೇಕಾಯಿತೆಂದು ಇದರಲ್ಲಿ ಪ್ರತಿವಾದಿಗಳ ಯಾವುದೇ ತಪ್ಪು ಇರುವುದಿಲ್ಲವೆಂದು ಆದ ಕಾರಣ ಅಪೀಲನ್ನು ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

4) ಉಭಯಪಕ್ಷಕಾರರು ಸಲ್ಲಿಸಿದ ಮೇಲ್ಮನವಿ ಹಾಗೂ ತಕರಾರಿನ ಅಂಶಗಳನ್ನು ಪರಿಗಣಿಸಿ ಈ ಪ್ರಕರಣವನ್ನು ವಾದವಿವಾದಕ್ಕೆ ಮುಂದೂಡಲಾಗಿತ್ತು. ಸದರಿ ವಾದವಿವಾದದ ಕಾಲದಲ್ಲಿ ಅಪೀಲುದಾರರು ಹಾಗೂ ಅವರ ಪರ ವಕೀಲರು ಹಾಜರಾಗಿ ಈಗಾಗಲೇ ತಾವು ಬಳಸುತ್ತಿರುವ 100 KVA ವಿದ್ಯುತ್ ಭಾರಕ್ಕೆ ನೀಡಬೇಕಾಗಿದ್ದ ಸೆಕ್ಯೂರಿಟಿ ಡೆಪಾಸಿಟ್ (Security Deposit) ರೂ. 3,49,297/– ಹಣವನ್ನು ತಾವು ಡೆಪಾಸಿಟ್ (Deposit) ಮಾಡಿರುತ್ತೇವೆಂದು ನುಡಿದು ಅದರಂತೆ ಒಂದು ಮೆಮೋ ಕೂಡ ಸಲ್ಲಿಸಿರುತ್ತಾರೆ. ಇದನ್ನು ಎರಡನೇ ಪ್ರತಿವಾದಿಯು ಒಪ್ಪಿಕೊಂಡು ತಾವೂ ಸಹ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆಯು ಪ್ರಶ್ನಿತ ಆದೇಶದಲ್ಲಿ ನೀಡಿದ ನಿರ್ದೇಶನದಂತೆ ಹೆಚ್ಚುವರಿ ಡೆಪಾಸಿಟ್ (Deposit) ಮೊತ್ತ ರೂ. 47,56,840/– ಹಣವನ್ನು ಅಪೀಲುದಾರರಿಗೆ ಹಿಂದಿರುಗಿಸುತ್ತೇವೆಂದು ನುಡಿದು ಆ ರೀತಿಯಾಗಿ ಹಣವನ್ನು ಮರು ಪಾವತಿ ಮಾಡಿದ ಬಗ್ಗೆ ಒಂದು ಮೆಮೊವನ್ನು ಸಲ್ಲಿಸಿರುತ್ತಾರೆ. ಅಪೀಲುದಾರರು ಸಹ ತಾವು ರೂ. 47,56,840/– ಮೊತ್ತವನ್ನು ಪಡೆದಿರುತ್ತೇವೆಂದು ಒಪ್ಪಿ ನುಡಿದಿರುತ್ತಾರೆ. ಈ ರೀತಿಯಾಗಿ ಉಭಯಪಕ್ಷಕಾರರು ಸಲ್ಲಿಸಿದ ಮೆಮೊ ಹಾಗೂ ಹೇಳಿಕೆಯನ್ನು ಈ ಪ್ರಾಧಿಕಾರವು ಅವಲೋಕಿಸಿರುತ್ತದೆ ಆದ್ದರಿಂದ ಅಪೀಲುದಾರರು ತಮ್ಮ ಅಪೀಲಿನಲ್ಲಿ ಕೋರಿದಂತೆ Clause 34.04 of the Conditions of Supply

of Electricity of Distributions Licensees in the State of Karnataka ಅನ್ವಯ ಬಡ್ಡಿಯನ್ನು ಪಡೆಯಲು ಅರ್ಹರಾಗಿರುತ್ತಾರೆಯೇ ಅಥವಾ ಇಲ್ಲವೆ ಎಂಬುದನ್ನು ಮಾತ್ರ ಈ ಪ್ರಾಧಿಕಾರವು ಪ್ರಸ್ತುತ ಪ್ರಕರಣದಲ್ಲಿ ನಿರ್ಧರಿಸಬೇಕಾಗಿರುತ್ತದೆ. ಇಷ್ಟಕ್ಕೆ ಸಂಬಂಧಿಸಿದಂತೆ ಮಾತ್ರ ವಾದವಿವಾದಕ್ಕೆ ಮುಂದೂಡಲಾಗಿರುತ್ತದೆ.

5) ಉಭಯಪರ ವಾದವಿವಾದಗಳನ್ನು ಕೇಳಿರುತ್ತೇನೆ ಹಾಗೂ ಕಡತದ ಪರೀಶಿಲನೆಯನ್ನು ಮಾಡಿರುತ್ತೇನೆ.

6) ಈ ಹಂತದಲ್ಲಿ ಮೇಲ್ಮನವಿಯ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳು ಮೂಡಿಬರುತ್ತವೆ:–

   i. ಅಪೀಲುದಾರರು ತಮ್ಮ ಅಪೀಲಿನಲ್ಲಿ ಕೋರಿದಂತೆ Clause 34.04 of the Conditions of Supply of Electricity of Distributions Licensees in the State of Karnataka ಅಡಿಯಲ್ಲಿ ಬಡ್ಡಿಯನ್ನು ಎದುರುದಾರರಿಂದ ಪಡೆಯಲು ಅರ್ಹರಾಗಿರುತ್ತಾರೆಯೇ?

   ii. ಏನು ಆದೇಶ?

7) ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ರೀತಿ ಉತ್ತರಿಸಿದ್ದೇನೆ.

ಅಂಶ (i) – ಭಾಗಶಃ ಸಕಾರಾತ್ಮಕವಾಗಿ

ಅಂಶ (ii) – ಕಡೆಯ ಆದೇಶದಂತೆ

8) **<u>ಅಂಶ (i):</u>** ವಾದವಿವಾದದ ಸಮಯದಲ್ಲಿ ಮೇಲ್ಮನವಿದಾರರ ಪರ ವಕೀಲರು ಹಾಜರಾಗಿ ತಮ್ಮ ವಾದವನ್ನು ಮಂಡಿಸುತ್ತಾ ಎದುರುದಾರರು ಹೆಚ್ಚುವರಿ ಡೆಪಾಸಿಟ್ (Deposit) ಹಣವನ್ನು ನಿಗಧಿತ ಅವಧಿಯಲ್ಲಿ ತಮಗೆ ವಾಪಸ್ಸು ಮಾಡಬೇಕಾಗಿತ್ತೆಂದು ಆದರೆ ಆ ರೀತಿ ಮಾಡಿಲ್ಲವೆಂದು ಈ ಪ್ರಾಧಿಕಾರದ ಮುಂದೆ ಹಾಜರಾದ ನಂತರ

27.07.2021ರಂದು ರೂ. 47,56,840/– ಮಾತ್ರ ವಾಪಸ್ಸು ಮಾಡಿರುತ್ತಾರೆಂದು ಆದರೆ Clause 34.04 of the Conditions of Supply of Electricity of Distributions Licensees in the State of Karnataka ಪ್ರಕಾರ ಹೆಚ್ಚುವರಿ ವಿದ್ಯುತ್ ಹೊರೆಯನ್ನು ಕಡಿತಗೊಳಿಸಲು ಅನುಮೋದನೆ ನೀಡಿದ ದಿನಾಂಕದಿಂದ 2 ತಿಂಗಳೊಳಗಾಗಿ ಹೆಚ್ಚುವರಿ ಸೆಕ್ಯುರಿಟಿ ಡೆಪಾಸಿಟ್ (Security Deposit) ಹಣವನ್ನು ವಾಪಸ್ಸು ಮಾಡಬೇಕೆಂದೂ ಆ ರೀತಿ ಮಾಡದೇ ಹೋದಲ್ಲಿ ಸದರಿ ಹೆಚ್ಚುವರಿ ಡೆಪಾಸಿಟ್ (Deposit) ಹಣವನ್ನು ವಾಪಸ್ಸು ಮಾಡುವವರೆಗೂ ಆ ಹಣಕ್ಕೆ ಮಾಸಿಕ ಶೇಕಡ 1% ರಷ್ಟು ಬಡ್ಡಿಯನ್ನು ಸೇರಿಸಿ ಕೊಡಬೇಕಾಗುತ್ತದೆಂದು. ಆದ್ದರಿಂದ ಈ ಬಗ್ಗೆ ತಾವು ಸಲ್ಲಿಸಿರುವ ದಿನಾಂಕ 16.07.2021ರ ಮೆಮೊ ಪ್ರಕಾರ ಬಡ್ಡಿ ಹಣವನ್ನು ಪಾವತಿ ಮಾಡುವಂತೆ ಎದುರುದಾರರಿಗೆ ನಿರ್ದೇಶನ ನೀಡಿ ಆದೇಶ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

9) ಎರಡನೇ ಪ್ರತಿವಾದಿಯವರು ತನ್ನ ವಾದವನ್ನು ಮಂಡಿಸುತ್ತಾ ಅಪೀಲುದಾರರು ತಮ್ಮ ಇಲಾಖೆಗೆ ನಿಯಮಾನುಸಾರ ಕಾಲಕಾಲಕ್ಕೆ ಒದಗಿಸಬೇಕಾದ ದಾಖಲೆಗಳನ್ನು ಒದಗಿಸಿರುವುದಿಲ್ಲವೆಂದು ದಿನಾಂಕ 13.04.2016ರಂದು ಅಪೀಲುದಾರರು 1050 KVA ಇರುವ ಹೊರೆಯನ್ನು 100 KVA ಕಡಿಮೆಗೊಳಿಸಬೇಕಾಗಿ ಅರ್ಜಿಯನ್ನು ಸಲ್ಲಿಸಿದ್ದರೆಂದು ಆದರೇ ತಮ್ಮ ಸ್ಥಾವರ ಸಂಖ್ಯೆಗೆ ದಿನಾಂಕ 27.05.2015ರಂದು ಅನಧಿಕೃತವಾಗಿ ಅವರ ಕಂಪನಿಯ ಆವರಣದಲ್ಲಿರುವ ಮತ್ತೊಂದು ಕಟ್ಟಡವಾದ ಮೆ। ಶೇಲ್ ಇಂಡಿಯಾ ಕಂಪನಿಗೆ ವಿದ್ಯುತ್ ಸಂಪರ್ಕ ನೀಡಿರುತ್ತಾರೆಂದೂ ಒಂದನೇ ಪ್ರತಿವಾದಿಯ ಜಾಗೃತದಳದವರು ಇದನ್ನು ಪತ್ತೆ ಮಾಡಿ ರೂ. 125547954/–ಗಳನ್ನು ಹಿಂಬಾಕಿ ಪಾವತಿಗಾಗಿ ನೋಟಿಸ್ ನೀಡಿರುತ್ತಾರೆಂದು, ಈ ಬಗ್ಗೆ OP 24/2015 ಎಂಬ

ದಾವೆ ದಾಖಲಾಗಿದ್ದು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಪೆಂಡಿಂಗ್ ಇರುತ್ತದೆಂದು ಈ ಕಾರಣಕ್ಕಾಗಿ ಹಾಗೂ ಹಿಂಬಾಕಿ ಮೊತ್ತವನ್ನು ಗ್ರಾಹಕರು ಪಾವತಿ ಮಾಡದೇ ಇದ್ದ ಕಾರಣ ಸದರಿ ಯವರು ಹೊರೆ ಕಡಿಮೆಗೊಳಿಸಲು ನೀಡಿದ ಅರ್ಜಿಯನ್ನು ಪುರಸ್ಕರಿಸಿರುವುದಿಲ್ಲವೆಂದು ಈ ಬಗ್ಗೆ 25.04.2016ರಂದು ಒಂದು ಹಿಂಬರಹವನ್ನು ಕೂಡ ಗ್ರಾಹಕರಿಗೆ ಕೊಡಲಾಗಿದೆಯೆಂದು ನುಡಿದಿರುತ್ತರೆ.

10) ಮತ್ತೇ ಮುಂದುವರೆದು ಪುನಃ ಗ್ರಾಹಕರು ದಿನಾಂಕ 18.08.2017ರಂದು ತಮ್ಮ ವಿಭಾಗ ಕಛೇರಿಗೆ ಅರ್ಜಿಯನ್ನು ಸಲ್ಲಿಸಿ ತಮ್ಮ 1250 KVA ರಂತೆ ಇರುವ ಹೊರೆಯನ್ನು 100 KVA ಕಡಿಮೆಗೊಳಿಸಬೇಕೆಂದು ಕೋರಿರುತ್ತಾರೆಂದು ತದನಂತರ ವಿಭಾಗ ಕಛೇರಿಯಿಂದ ರಾಮನಗರ ವೃತ್ತ ಅಧೀಕ್ಷಕ ಇಂಜಿನಿಯರವರಿಗೆ ದಿನಾಂಕ 21.08.2017ರಂದು ಒಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತೆಂದು ನಂತರ ಸದರಿಯವರು ನಿಗಮಕಾರ್ಯಾಲಯ ಕಾನೂನು ಶಾಖೆಯಿಂದ ಅನುಮೋದನೆಯನ್ನು ಪಡೆದು ಅಪೀಲುದಾರರು ಕೋರಿದಂತೆ ಹೊರೆಯನ್ನು 100 KVAಗೆ ಕಡಿಮೆಗೊಳಿಸಬಹುದೆಂದು ಅಧೀಕೃತ ಜ್ಞಾಪನವನ್ನು ದಿನಾಂಕ 06.09.2017ರಂದು ಹೊರಡಿಸಿರುತ್ತಾರೆಂದು ನಂತರ ಗ್ರಾಹಕರಿಗೆ ವಿಭಾಗ ಕಛೇರಿಯಿಂದ ದಿನಾಂಕ 23.09.2017ರಂದು ಒಂದು ಪತ್ರ ಬರೆದು ಆ ಮೂಲಕ ಮೀಟರಿಂಗ್ ಕ್ಯುಬಿಕಲ್ (Metering Cubical) ಬದಲಾವಣೆ ಮಾಡಲು ತಗಲುವ ಮೇಲ್ವಿಚಾರಣಾ ಶುಲ್ಕವನ್ನು ಪಾವತಿಸಲು ತಿಳಿಸಿರುತ್ತಾರೆಂದು ಅದರಂತೆ 22.11.2017ರಂದು ಗ್ರಾಹಕರು ಡಿಡಿ ಮೂಲಕ ಮೇಲ್ವಿಚಾರಣಾ ಶುಲ್ಕವನ್ನು ಪಾವತಿ ಮಾಡಿರುತ್ತಾರೆಂದು ಇದಾದ ಮೇಲೆ ಎರಡನೇ ಪ್ರತಿವಾದಿ ದಿನಾಂಕ 04.01.2018ರಂದು ಈ ಬಗ್ಗೆ ಅಧಿಕೃತ ಜ್ಞಾಪನವನ್ನು ಹೊರಡಿಸಿರುತ್ತಾರೆಂದು ತದನಂತರ ದಿನಾಂಕ 14.05.2019ರಂದು ಠೇವಣೀ ಹಿಂಪಾವತಿಗಾಗಿ ಸಂಪೂರ್ಣ ವಿವರಗಳನ್ನು ನೀಡುವಂತೆ

ಗ್ರಾಹಕರಿಗೆ ಪತ್ರದ ಮೂಲಕ ತಿಳಿಸಲಾಗಿದ್ದು ಅದರಂತೆ ಗ್ರಾಹಕರು 17.05.2019ರಂದು ವಿವರಗಳನ್ನು ಸಲ್ಲಿಸಿರುತ್ತಾರೆಂದು ಅದನ್ನು ವಿಭಾಗೀಯ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿರುತ್ತದೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ತಮ್ಮ ಸ್ಥಾವರ ಸಂಖ್ಯೆ AKLHT 184ನಲ್ಲಿ ತಾವು ಪಾವತಿಸಿದ ಠೇವಣೀ ಹಿಂಪಾವತಿ ಪಡೆಯಲು ಗ್ರಾಹಕರು ಒಂದು ದೂರನ್ನು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆಗೆ ಸಲ್ಲಿಸಿದ್ದರೆಂದು ಸದರಿ ವೇದಿಕೆಯು ಮಧ್ಯಂತರ ಆದೇಶ ದಿನಾಂಕ 13.06.2019ರಲ್ಲಿ 4 ವಾರಗಳ ಒಳಗೆ ಠೇವಣಿ ಹಿಂಪಾವತಿಗೆ ಆದೇಶ ಮಾಡಿದ್ದರೆಂದು ಈ ಬಗ್ಗೆ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳಲು ತಮ್ಮ ವಿಭಾಗ ಕಛೇರಿಗೆ ಹಾಗೂ ರಾಮನಗರ ವೃತ್ತ, ಅಧೀಕ್ಷಕ ಇಂಜಿನಿಯರ್‌ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದೆವೆಂದು, ಆದರೆ AKLHT 184 ಸ್ಥಾವರಕ್ಕೆ ಗ್ರಾಹಕರು ಠೇವಣಿ ಪಾವತಿಸಿದ ಮೂಲ ರಸೀದಿಗಳು ಇರಲಿಲ್ಲವೆಂದು ಆದ್ದರಿಂದ ಅಂತಹ ರಸೀದಿಗಳನ್ನು ಅಥವಾ ಇಂಡೆಮ್‌ನಿಟಿ ಬಾಂಡ್‌ನ್ನು (Indemnity Bond) ಸಲ್ಲಿಸುವಂತೆ ಅಪೀಲುದಾರರಿಗೆ ತಿಳಿಸಲಾಗಿತ್ತೆಂದು ಈ ಬಗ್ಗೆ ಹಲವಾರು ಬಾರಿ ಪತ್ರ ವ್ಯವಹಾರಗಳನ್ನು ಕೂಡ ಮಾಡಿರುತ್ತೇವೆಂದು, ತದನಂತರ ಗ್ರಾಹಕರು 25.08.2020ರಂದು ಇಂಡೆಮ್‌ನಿಟಿ ಬಾಂಡ್‌ನ್ನು (Indemnity Bond) ಮತ್ತು ರಸೀದಿಗಳ ವಿವರಗಳನ್ನು ಸಲ್ಲಿಸಿರುತ್ತಾರೆಂದು ಈ ಆಧಾರದ ಮೇರೆಗೆ ಅದೇ ದಿನ ಪ್ರಸ್ತಾವನೆಯನ್ನು ವಿಭಾಗೀಯ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಕಳಿಸಿಕೊಡಲಾಗಿತ್ತೆಂದು ಅಲ್ಲಿಂದ ರಾಮನಗರ ವೃತ್ತ, ಅಧೀಕ್ಷಕ ಇಂಜಿನಿಯರ್‌ರವರಿಗೆ ದಿನಾಂಕ 31.08.2020ರಂದು ಮರು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆಂದು, ತದನಂತರ 08.09.202ರಂದು ಗ್ರಾಹಕರ ಕಡತವನ್ನು ಮುಂದಿನ ಕ್ರಮಕ್ಕಾಗಿ ವಲಯ ಕಛೇರಿಗೆ ಮತ್ತೊಮ್ಮೆ ಸಲ್ಲಿಸಲಾಗಿತ್ತೆಂದು ಈ ಮಧ್ಯೆ ಗ್ರಾಹಕರು ಸಲ್ಲಿಸಿದ್ದ ದೂರನ್ನು ಗ್ರಾಹಕರ

ಕುಂದು ಕೊರತೆಗಳ ನಿವಾರಣಾ ವೇದಿಕೆಯವರು ದಿನಾಂಕ 03.03.2021ರಂದು ಆದೇಶ ಹೊರಡಿಸಿ 4 ವಾರಗಳೊಳಗಾಗಿ ಗ್ರಾಹಕರಿಗೆ ಠೇವಣಿ ಹಿಂಪಾವತಿ ಮಾಡಲು ತಿಳಿಸಿರುತ್ತಾರೆಂದು ಸದರಿ ಆದೇಶವು 2ನೇ ಪ್ರತಿವಾದಿಯ ಕಛೇರಿಗೆ 20.03.2021ರಂದು ತಲುಪಿರುತ್ತದೆಂದು, ತದನಂತರ ಗ್ರಾಹಕರು ತಮ್ಮ ಠೇವಣಿ ಮೊತ್ತ ಹಾಗೂ ಬಡ್ಡಿಯನ್ನು ಅಂದರೆ ಒಟ್ಟು ಮೊತ್ತ ರೂ. 64,11,971/– ಹಣವನ್ನು ಹಿಂದುರಿಗಿಸಲು ಮನವಿ ಸಲ್ಲಿಸಿದ್ದರೆಂದು ಇವರ ಅರ್ಜಿಯನ್ನು ಕಛೇರಿಯಲ್ಲಿ ಪರೀಶಿಲಿಸಿ ಗ್ರಾಹಕರು ಪಾವತಿಸಿದ ಠೇವಣಿ ಮೊತ್ತದಲ್ಲಿ ಪ್ರಸ್ತುತ 100 KVA ವಿದ್ಯುತ್ ಹೊರೆಗೆ ಮತ್ತು ಬೇಡಿಕೆಗೆ ಅನುಗುಣವಾಗಿ ಬದ್ರತಾ ಠೇವಣಿ ಮೊತ್ತ ರೂ. 48,67,710/–ಗಳಾಗಿದ್ದು ಇವುಗಳಲ್ಲಿ ರೂ. 1,10,870/– ಹಣವನ್ನು ಪ್ರಸ್ತುತ ಭದ್ರತಾ ಠೇವಣಿಗೆ ಉಳಿಸಿಕೊಂಡು ಉಳಿದ ಭದ್ರತಾ ಠೇವಣಿ ಹಣ ರೂ. 3,49,297/– ಹಣವನ್ನು ಗ್ರಾಹಕರಿಂದ ಕಟ್ಟಿಸಿಕೊಂಡು ರಸೀದಿ ಪಡೆದನಂತರ ಮಧ್ಯಂತರ ಆದೇಶದಲ್ಲಿ ವೇದಿಕೆಯು ನೀಡಿದ ನಿರ್ದೇಶನದಂತೆ ರೂ. 47,56,840/– ಹಣವನ್ನು ಹಿಂಪಾವತಿ ಮಾಡಲು 31.03.2021ರಂದು ಅನುಮೋದನೆ ನೀಡಿರುತ್ತಾರೆಂದು ಈ ರೀತಿಯಾಗಿ ಠೇವಣಿ ಹಿಂಪಾವತಿ ಮಾಡುವುದರಲ್ಲಿ ಕಾರಣಾಂತರಗಳಿಂದ ವಿಳಂಬ ಆಗಿದೆಯೇ ಹೊರತು ಯಾವುದೇ ದುರುದ್ದೇಶದಿಂದ ಕಾಲ ವಿಳಂಬ ಮಾಡಿರುವುದಿಲ್ಲವೆಂದು ಅಷ್ಟೇ ಅಲ್ಲದೆ ಗ್ರಾಹಕರು 25.08.2020ರಂದು ಇಂಡೆಮ್‌ನಿಟಿ ಬಾಂಡ್‌ನಲ್ಲಿ (Indemnity Bond) ನೀಡಿದ ವಿವರಗಳು ಮತ್ತು ರಸೀದಿ ಸಂಖ್ಯೆಗಳು ತಪ್ಪು ಮಾಹಿತಿ ಆಗಿತ್ತೆಂದು, ಅದೂ ಅಲ್ಲದೆ ಗ್ರಾಹಕರಿಗೆ ನೀಡಬೇಕಾದ ಮೊತ್ತವು ಭಾರಿ ಮೊತ್ತವಾದ ಕಾರಣ ಇದನ್ನು ಹಿಂಪಾವತಿ ಮಾಡುವ ಅಧಿಕಾರ ನಿಗಮ ಕಛೇರಿ ವ್ಯಾಪ್ತಿಗೆ ಇರುತ್ತದೆಂದು ಆದ್ದರಿಂದ ಗ್ರಾಹಕರು ದಿನಾಂಕ 26.04.2021ರಂದು ಸಂಪೂರ್ಣ ವಿವರಗಳನ್ನು ಮತ್ತು ಸರಿಯಾದ ರಸೀದಿ

ಸಂಖ್ಯೆಗಳನ್ನು ನಮೂದಿಸಿ ಒಂದು ಇನಡೆಮ್‌ನಿಟಿ ಬಾಂಡ್ (Indemnity Bond) ನೀಡಿರುತ್ತಾರೆಂದು ಅದನ್ನು ಪರೀಶೀಲಿಸಿ ಗ್ರಾಹಕರಿಗೆ ವೇದಿಕೆಯು ಆದೇಶಿಸಿದ ರೀತಿಯಲ್ಲಿ ಹಣವನ್ನು ವಾಪಸ್ಸು ಮಾಡಲಾಗಿದೆಯೆಂದು ಈ ಎಲ್ಲಾ ಕಾರಣಗಳಿಂದ ವಿಳಂಬ ಆಗಿರುತ್ತದೆಯೇ ಹೊರತು ಬೇರೆ ಯಾವುದೇ ಉದ್ದೇಶದಿಂದ ಅಲ್ಲ ಎಂದು ಇವೆಲ್ಲವನ್ನು ಪರಿಗಣಿಸಿ ಅಪೀಲುದಾರರು ಕೋರಿದ ಕೊರಿಕೆಯನ್ನು ನಿರಾಕರಿಸಬೇಕೆಂದು ಮತ್ತು ಅಪೀಲನ್ನು ಮುಕ್ತಾಯ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

11) Clause 34.04 of the Conditions of Supply of Electricity of Distributions Licensees in the State of Karnataka ಪ್ರಕಾರ:–

> *"Where the Contract demand / Sanctioned load is reduced, the Security Deposit required shall be recalculated for the reduced Contract demand / Sanctioned load on a pro-rata basis on average monthly bill of the preceding calendar year. Any excess Security Deposit held over the recalculated average monthly bill amount of the preceding calendar year shall be refunded to the Consumer by cheque, within 2 months from the date of approval of reduction of Contract demand / Sanctioned load.*
> *If the amount due to the Consumer is not refunded by cheque within two months from the date of approval, the Licensee shall pay interest at 1% per month on actual number of days of delay on the amount due for refund."* ಎಂಬುದಾಗಿ ಇರುತ್ತದೆ.

12) ಉಭಯಪಕ್ಷಕಾರರು ಹಾಜರು ಪಡಿಸಿದ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. Annexure-A ನಲ್ಲಿರುವ ದಾಖಲೆಯು ದಿನಾಂಕ 23.09.2017ರ ಅಪೀಲುದಾರರಿಗೆ Executive Engineer (Ele), BESCOM, ಚಂದಾಪುರ ರವರು ಬರೆದ ಪತ್ರದ ನಕಲಾಗಿದ್ದು, ಈ ದಾಖಲೆಯ ಪ್ರಕಾರ ಅಪೀಲುದಾರ ಸ್ಥಾವರಕ್ಕೆ 1250 KVA

ವಿದ್ಯುತ್ತನ್ನು 100 KVA ವಿದ್ಯುತ್ ಭಾರಕ್ಕೆ ಕಡಿತಗೊಳಿಸುವ ಬಗ್ಗೆ ಶರತ್ತುಗಳ ಸಹಿತ ಅನುಮೋದನೆ ಆಗಿರುವುದು ಕಂಡುಬರುತ್ತದೆ. ಅದರಂತೆ 90 ದಿನಗಳಳೊಳಗಾಗಿ ಅಪೀಲುದಾರರು ಈ ಪತ್ರದಲ್ಲಿ ಹೇಳಿದಂತಹ ಮೊತ್ತವನ್ನು ಪ್ರತಿವಾದಿ/ಎದುರುದಾರರಿಗೆ ಪಾವತಿಸಬೇಕಾಗಿರುತ್ತದೆ. Annexure-Bನಲ್ಲಿ ಇರುವ ದಾಖಲೆಯು ದಿನಾಂಕ 21.05.2018ರ ಇನ್‌ಡೆಮ್‌ನಿಟಿ ಬಾಂಡ್ (Indemnity Bond) ಆಗಿರುತ್ತದೆ. ಈ ದಾಖಲೆಯಲ್ಲಿ ತೋರಿಸಿರುವಂತಹ ರಸೀದಿಗಳಲ್ಲಿ ಗ್ರಾಹಕರು ಕೇಲವು ರಸೀದಿಗಳ ಸಂಖ್ಯೆಗಳನ್ನು ತಪ್ಪಾಗಿ ಕೊಟ್ಟಿರುತ್ತಾರೆಂದು ಎರಡನೇ ಎದುರುದಾರರು ನುಡಿದಿರುತ್ತಾರೆ. Annexure-C ನಲ್ಲಿ ಇರುವ ದಾಖಲೆಯು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಬೆಂಗಳೂರು ನಗರ ರವರು ಪ್ರಕರಣ ಸಂಖ್ಯೆ CGRF 42/2016–17 ರಲ್ಲಿನ ಪ್ರಕರಣದಲ್ಲಿ ಮಧ್ಯಂತರ ಆದೇಶವನ್ನು 13.06.2019ರಂದು ಹೊರಡಿಸಿರುವುದು ಕಂಡು ಬರುತ್ತದೆ, ಈ ಮಧ್ಯಂತರ ಆದೇಶದ ಅನ್ವಯ ಎರಡನೇ ಪ್ರತಿವಾದಿಯು ಅಪೀಲುದಾರರಿಗೆ ಆದೇಶವಾದ ಎರಡು ವಾರಗಳೊವರೆಗೆ ರೂ. 47,56,840/–ರಷ್ಟು ಹೆಚ್ಚುವರಿ ಡೆಪಾಸಿಟ್ (Deposit) ಹಣವನ್ನು ಮರುಪಾವತಿ ಮಾಡಲು ಆದೇಶಿಸಲಾಗಿರುತ್ತದೆ. Annexure-D ನಲ್ಲಿ ಇರುವ ದಾಖಲೆಯು 18.10.2019ರಂದು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ರವರು CGRF 42/2016–17ರಲ್ಲಿ ಹೊರಡಿಸಿದ ಮತ್ತೊಂದು ಆದೇಶವಾಗಿರುತ್ತದೆ, ಸದರಿ ಆದೇಶದಲ್ಲಿ ಗ್ರಾಹಕರ ವೇದಿಕೆಯು "Under these circumstances, we will be forced to invoke Section 146 recommending the same to KERC if submissions to be provided by the Respondent is not upto the mark" ಎಂಬುದಾಗಿ

ಅವಲೋಕಿಸಿರುತ್ತದೆ. Annexure-Eನಲ್ಲಿ ಇರುವ ದಾಖಲೆಯು ದಿನಾಂಕ 24.08.2020ರ ಒಂದು ಪತ್ರವಾಗಿದ್ದು ಅಪೀಲುದಾರರು ಎರಡನೇ ಪ್ರತಿವಾದಿಗೆ ಬರೆದಂತಹ ಪತ್ರವಾಗಿರುತ್ತದೆ ಹಾಗೂ ಇದರೊಂದಿಗೆ ದಿನಾಂಕ 24.08.2020ರ ಮತ್ತೊಂದು ಇನ್‌ಡೆಮ್‌ನಿಟಿ ಬಾಂಡ್‌ನ್ನು (Indemnity Bond) ಎದುರುದಾರರಿಗೆ ನೀಡಿರುವುದು ಕಂಡು ಬರುತ್ತದೆ. Annexure-Fನಲ್ಲಿ ಇರುವ ದಾಖಲೆಯು KERCರವರು ದೂರು ಸಂಖ್ಯೆ 1/2020ರಲ್ಲಿ ದಿನಾಂಕ 16.02.2021ರಂದು ಮಾಡಿದಂತಹ ಆದೇಶದ ನಕಲಾಗಿರುತ್ತದೆ. Annexure-Gನಲ್ಲಿ ಇರುವ ದಾಖಲೆಯು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯ ಪ್ರಕರಣ ಸಂಖ್ಯೆ CGRF 42/2016–17ನಲ್ಲಿರುವ Proceedings for hearing ಆಗಿದ್ದು ಇದರಲ್ಲಿ ಎರಡನೇ ಎದುರುದಾರರು "As per KERC/BESCOM norms, the proposal has been already submitted to Chief Engineer (Ele), BRAZ, through proper channel on 25.08.2020 after obtaining approval from Chief Engineer (Ele) BRAZ, further action will be taken from this office immediately" ಎಂಬುದಾಗಿ ನುಡಿದಿರುವುದು ಕಂಡುಬರುತ್ತದೆ. Annexure-Hನಲ್ಲಿ ಇರುವ ದಾಖಲೆಯು ದಿನಾಂಕ 01.03.2021ರಂದು ಅಪೀಲುದಾರರು ಎರಡನೇ ಪ್ರತಿವಾದಿಗೆ ಬರೆದ ಪತ್ರವಾಗಿರುತ್ತದೆ. Annexure-Iನಲ್ಲಿ ಇರುವ ದಾಖಲೆಯು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯುರವರು ಪ್ರಕರಣ ಸಂಖ್ಯೆ CGRF 42/2016–17ನಲ್ಲಿ ಮಾಡಿದ ಅಂತಿಮ ಆದೇಶವಾಗಿರುತ್ತದೆ. Annexure-J ಹಾಗೂ Annexure-Kನಲ್ಲಿ ಅಪೀಲುದಾರರು ತಮ್ಮ ಸ್ಥಾವರಕ್ಕೆ ಸಂಬಂಧಿಸಿದ ಬ್ಯಾಂಕ್

ಖಾತೆಯ ವಿವರಗಳನ್ನು ನೀಡಿರುವುದು ಕಂಡುಬರುತ್ತದೆ. Annexure-L ಹಾಗೂ Annexure-Mನಲ್ಲಿ ದಿನಾಂಕ 12.04.2021ರಂದು ಎರಡನೇ ಪ್ರತಿವಾದಿಯು ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್), ಬೆಸ್ಕಾಂ, ಚಂದಾಪುರ ವಿಭಾಗ, ಚಂದಾಪುರ ರವರಿಗೆ ಹಿಂಪಾವತಿ ಆದೇಶವು 31.03.2021ರಂದು ಅನುಮೋದನೆ ನೀಡಿರುವುದರಿಂದ ಸದರಿ ಆದೇಶಗಳ ಪ್ರಕಾರ ಮತ್ತು ಗ್ರಾಹಕರ ಕೋರಿಕೆಯ ಮೇರೆಗೆ ಹಿಂಪಾವತಿ ಹಣ ಪಾವತಿಸಲು ತಮ್ಮ ಕಛೇರಿಯ ವ್ಯಾಪ್ತಿಯನ್ನು ಮೀರಿರುವುದರಿಂದ ಮುಂದಿನ ಕ್ರಮಕ್ಕಾಗಿ ಬರೆದಂತಹ ಪತ್ರವಾಗಿರುತ್ತದೆ. ಎರಡನೇ ಪ್ರತಿವಾದಿಯು ಸಹ ತಮ್ಮ ತಕರಾರಿನೊಂದಿಗೆ ಅಪೀಲುದಾರರು ನೀಡಿದ್ದರು ಎನ್ನಲಾದ ಎರಡು ಇನ್‌ಡೆಮ್‌ನಿಟಿ ಬಾಂಡ್‌ಗಳ (Indemnity Bond) ನಕಲುಗಳನ್ನು ಸಲ್ಲಿಸಿರುತ್ತಾರೆ. ಆದರೆ ಈಗಾಗಲೆ ಸದರಿ ದಾಖಲೆಗಳ ಬಗ್ಗೆ ಈ ಮೇಲೆ ಚರ್ಚಿಸಿರುವುದರಿಂದ ಅವುಗಳನ್ನು ಪುನಃ ಚರ್ಚೆಗೆ ಒಳಪಡಿಸಿಲ್ಲ.

13) ಈ ರೀತಿಯಾಗಿ ಮೇಲ್ಕಂಡಂತಹ ಎಲ್ಲಾ ದಾಖಲೆಗಳ ವಾಸ್ತವಾಂಶಗಳನ್ನು ಹಾಗೂ ವಾದವಿವಾದದ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕಂಡುಬರುವುದೇನೆಂದರೆ ದಿನಾಂಕ 04.01.2018ರಂದು ಎರಡನೇ ಪ್ರತಿವಾದಿಯು, ಗ್ರಾಹಕರು ವಿದ್ಯುತ್ ಭಾರವನ್ನು ಕಡಿತಗೊಳಿಸಲು ನೀಡಿದ ಅರ್ಜಿಯನ್ನು ಪರಿಗಣಿಸಿ ಅನುಮೋದಿಸಿರುತ್ತಾರೆ. Clause 34.04 of the Conditions of Supply of Electricity of Distributions Licensees in the State of Karnataka ಪ್ರಕಾರ ಈ ರೀತಿ ಅನುಮೋದನೆ ಮಾಡಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ ಹಿಂಬಾಕಿ ಮೊತ್ತವನ್ನು ಗ್ರಾಹಕರಿಗೆ ಮರುಪಾವತಿ ಮಾಡಬೇಕಿತ್ತು. ಅಂದರೆ ದಿನಾಂಕ 04.03.2018ರೊಳಗೆ ಹಿಂಬಾಕಿ ಮೊತ್ತದ ಹಣವನ್ನು ಗ್ರಾಹಕರಿಗೆ ಹಿಂದಿರುಗಿಸಬೇಕಾಗಿತ್ತು, ಆದರೆ ಆ ರೀತಿ ಆಗಿರುವುದಿಲ್ಲ.

ಎರಡನೇ ಪ್ರತಿವಾದಿಯು ಸಲ್ಲಿಸಿದ ತಕರಾರನ್ನು ಪರಿಶೀಲಿಸಿದಾಗ ದಿನಾಂಕ 17.05.2019ರಂದು ಗ್ರಾಹಕರು ಹಿಂಪಾವತಿ ಪಡೆಯಲು ಬೇಕಾದಂತಹ ರಸೀದಿ ಸಂಖ್ಯೆ ಹಾಗೂ ಇತರೆ ವಿವರಗಳನ್ನು ನೀಡಿರುತ್ತಾರೆ ಎಂದಾಗಿರುತ್ತದೆ. ವಾದವಿವಾದದ ಕಾಲದಲ್ಲಿ ಎರಡನೇ ಎದುರುದಾರರು, ಗ್ರಾಹಕರು ಸಮುಚಿತ ಮಾರ್ಗದಲ್ಲಿ ಇಲಾಖೆಯ ಹಣ ಕಟ್ಟಿರುವ ರಸೀದಿಗಳನ್ನು ಒಂದನೇ ಪ್ರತಿವಾದಿಗೆ ಒದಗಿಸಿದ್ದರೇ ಅದೇ ದಿನದಂದು ಹಣವನ್ನು ಹಿಂದಿರುಗಿಸಬಹುದಾಗಿತ್ತೆಂದು, ಆದರೆ ಗ್ರಾಹಕರು ಅಂತಹ ರಸೀದಿಗಳನ್ನು ಒದಗಿಸಲಿಲ್ಲ ಹಾಗೂ ರಸೀದಿ ಸಂಖ್ಯೆಗಳನ್ನು ನಮೂದು ಮಾಡಿದಂತಹ ಇನ್‌ಡೆಮ್‌ನಿಟಿ ಬಾಂಡ್‌ನ್ನು (Indemnity Bond) ಕೂಡ ಒದಗಿಸಿಲ್ಲವೆಂದು ನುಡಿದಿರುತ್ತಾರೆ. ಆದರೆ ಎರಡನೇ ಪ್ರತಿವಾದಿಯು ದಿನಾಂಕ 04.01.2018ದಿಂದ ಮುಂದಿನ ಎರಡು ತಿಂಗಳ ಅವಧಿಯಲ್ಲಿ ಇಂತಹ ರಸೀದಿ ಅಥವಾ ಇನ್‌ಡೆಮ್‌ನಿಟಿ ಬಾಂಡ್‌ನ್ನು (Indemnity Bond) ಒದಗಿಸಿಕೊಡುವಂತೆ ಗ್ರಾಹಕರಿಗೆ ತಿಳುವಳಿಕೆ ನೋಟಿಸ್ ಕೊಟ್ಟಿದ್ದರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಕೂಡ ಈ ಕಡತದಲ್ಲಿ ಮಾಹಿತಿ ಲಭ್ಯವಾಗುವುದಿಲ್ಲ.

14) ಎರಡನೇ ಪ್ರತಿವಾದಿಯ ತಕರಾರು ಹೇಳಿಕೆಯನ್ನು ಪರಿಶೀಲನೆ ಮಾಡಿದಾಗ ದಿನಾಂಕ 24.04.2019ರಂದು ಅಧ್ಯಕ್ಷರು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ಪಶ್ಚಿಮ ವೃತ್ತ, ಬೆವಿಕಂ, ಬಸವೇಶ್ವರನಗರ, ಬೆಂಗಳೂರು–79ರವರ ಅಧ್ಯಕ್ಷತೆಯಲ್ಲಿ ನಡೆದ ವಿಚಾರಣಾ ಸಭೆಯಲ್ಲಿ ಮೌಕಿಕವಾಗಿ ನೀಡಿದ ಸೂಚನೆಯ ಮೇರೆಗೆ ದಿನಾಂಕ 14.05.2019ರಂದು ಠೇವಣಿ ಹಿಂಪಾವತಿಗಾಗಿ ಸಂಪೂರ್ಣ ವಿವರಗಳನ್ನು ಸಲ್ಲಿಸುವಂತೆ ಕೋರಿ ಗ್ರಾಹಕರಿಗೆ ಪತ್ರವನ್ನು ಬರೆದಿದ್ದು, ಅದರಂತೆ ದಿನಾಂಕ 17.05.2019ರಂದು ಗ್ರಾಹಕರು ವಿವರಗಳನ್ನು ಸಲ್ಲಿಸಿದ್ದು ಅದನ್ನು ವಿಭಾಗೀಯ ಕಛೇರಿಗೆ ತಾವು ಕಳಿಸಿಕೊಟ್ಟಿದ್ದಾಗಿ ನುಡಿದಿರುತ್ತಾರೆ. ಅಂದರೆ 04.03.2018ರಿಂದ 14.05.2019ರವರೆಗೆ

ಎರಡನೇ ಪ್ರತಿವಾದಿಯು ಠೇವಣಿ ಹಿಂಪಾವತಿಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲವೆಂದು ಕಂಡುಬರುತ್ತದೆ. ಇಷ್ಟು ಅವಧಿಯ ಕಾಲದಲ್ಲಿ ಎರಡನೇ ಪ್ರತಿವಾದಿಯು ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಹೋದ ಬಗ್ಗೆ ಸಕಾರಣಗಳನ್ನು ನೀಡಿರುವುದಿಲ್ಲ.

15) Clause 34.04 of the Conditions of Supply of Electricity of Distributions Licensees in the State of Karnataka ಪ್ರಕಾರ ನಿಗಧಿತ ಎರಡು ತಿಂಗಳ ಅವಧಿಯೊಳಗೆ ಹಿಂಬಾಕಿ ಮೊತ್ತವನ್ನು ಪಾವತಿ ಮಾಡದೇ ಹೋದರೆ ತದನಂತರ ಸದರಿ ಮೊತ್ತವನ್ನು ಪಾವತಿ ಮಾಡುವ ದಿನಾಂಕದವರೆಗೂ ಪ್ರತಿವಾದಿಯು ಮಾಸಿಕ ಶೇ 1%ರಷ್ಟು ಬಡ್ಡಿಯನ್ನು ಸೇರಿಸಿ ಪಾವತಿ ಮಾಡಬೇಕಾಗುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಎರಡನೇ ಪ್ರತಿವಾದಿಯು ಗ್ರಾಹಕರಿಗೆ ನೀಡಬೇಕಾದ ಮೊತ್ತವು ಭಾರಿ ಮೊತ್ತವಾದ ಕಾರಣ ಅದನ್ನು ಪಾವತಿ ಮಾಡುವ ಅಧಿಕಾರ ತಮಗೆ ಇಲ್ಲವೆಂದು ಆದ ಕಾರಣ ತಮ್ಮ ಹಿರಿಯ ಅಧೀಕಾರಿಗಳಿಗೆ ಪತ್ರ ಮುಖೇನ ಮಾಹಿತಿ ನೀಡಿ ಸದರಿಯವರಿಂದ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆಂದು ಹಾಗೂ 2020 ಮಾರ್ಚ್ ತಿಂಗಳಿಂದ ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣದಿಂದ ಅಧಿಕಾರಿಗಳು ಹಾಗೂ ಸಿಬಂಧಿ ವರ್ಗದವರು ಕಛೇರಿಗೆ ಬಂದು ಕರ್ತವ್ಯ ನಿರ್ವಹಿಸಲು ಸಾಧ್ಯವಾಗಲಿಲ್ಲವೆಂದು, ಈ ಎಲ್ಲಾ ವಾಸ್ತವಾಂಶಗಳು ತಮ್ಮ ಹಿಡಿತದಲ್ಲಿ ಇರುವುದಿಲ್ಲವೆಂದು ನುಡಿದಿರುತ್ತಾರೆ. ಎರಡನೇ ಪ್ರತಿವಾದಿಯು ತೆಗೆದುಕೊಂಡಂತಹ ಈ ನಿಲುವನ್ನು ಅಪೀಲುದಾರರು ಕೂಡ ಅಲ್ಲಗೆಳದಿಲ್ಲ. ಅಷ್ಟೇ ಅಲ್ಲದೇ ಈ ಮಧ್ಯೆ ಅಪೀಲುದಾರರು ಸಂಬಂಧಪಟ್ಟ ಗ್ರಾಹಕರ ವೇದಿಕೆಯ ಮುಂದೆ ಹಾಗೂ KERC ಮುಂದೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಗಳ ವಿಚಾರಣಾ ಕಾಲದಲ್ಲಿಯೂ

ಸಹ ಎರಡನೇ ಪ್ರತಿವಾದಿಯು ಮೇಲ್ಕಂಡಂತೆಯೇ ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ, ಮತ್ತು ತಮ್ಮ ಹಿರಿಯ ಅಧಿಕಾರಿಗಳಿಂದ ಅನುಮೋದನೆ ದೊರೆತ ತಕ್ಷಣವೇ ಹಿಂಬಾಕಿಯ ಮೊತ್ತದ ಮುರುಪಾವತಿಗಾಗಿ ಕ್ರಮ ಕೈಗೊಳ್ಳುವುದಾಗಿ ನುಡಿದಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಹಾಗೂ ಮೇಲೆ ಚರ್ಚಿಸಿದಂತೆ ಉಂಟಾಗಿರುವ ಕೋವಿಡ್–19 ಸಾಂಕ್ರಾಮಿಕ ರೋಗದ ಪರಿಣಾಮಗಳ ಕಾರಣದಿಂದಲೂ ಎರಡನೇ ಪ್ರತಿವಾದಿಯು Clause 34.04 of the Conditions of Supply of Electricity of Distributions Licensees in the State of Karnatakaರಲ್ಲಿ ನುಡಿದಂತೆ ಎರಡು ತಿಂಗಳ ಕಾಲಾವದಿ ಪೂರ್ಣವಾದ ದಿನದಿಂದ ಹಿಂಬಾಕಿ ಹಣವನ್ನು ಪಾವತಿ ಮಾಡುವ ದಿನದವರೆಗೆ ಮಾಸಿಕ ಶೇಕಡ 1%ರಷ್ಟು ಬಡ್ಡಿಯನ್ನು ನೀಡಲೇಬೇಕಾಗುತ್ತದೆ ಎಂಬಂತಹ ಕರಾರುವಾಕ್ಕು ನಿಲುವನ್ನು ಒಪ್ಪಲಾಗುವುದಿಲ್ಲ. ಈ ಬಗ್ಗೆ ಮೇಲ್ಕಂಡ Clause 34.04 of the Conditions of Supply of Electricity of Distributions Licensees in the State of Karnatakaರಲ್ಲಿ ಇಂತಹ ಕೈಮೀರಿದ ಪರಿಸ್ಥಿತಿಗಳಲ್ಲಿ ಪ್ರತಿವಾದಿ (Licensee) ಯಾವ ಕ್ರಮವನ್ನು ಅನುಸರಿಸಬೇಕು ಅಥವಾ ಇಂತಹ ಸಂದರ್ಭಗಳಲ್ಲಿ ಅಂದರೆ ಪ್ರತಿವಾದಿ (Licensee)ರವರ ಯಾವುದೇ ತಪ್ಪು ಅಥವಾ ನಿರ್ಲಕ್ಷತೆ ಇಲ್ಲವೆಂದು ಈ ಪ್ರಾಧಿಕಾರವು ಮನಗೊಂಡು ವಿವೇಚನಾತ್ಮಕ ರೀತಿಯಲ್ಲಿ ಪ್ರಕರಣ ಹಾಗೂ ಸಂದರ್ಭಗಳನ್ನು ಪರಿಶೀಲಿಸಿ ಆದೇಶ ಮಾಡಬಹುದೇ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲದೇ ಹೋದರೂ ಸಹ Regulations relating to Consumer Grievance Redressal Forum and Ombudsman, Regulations 22.4 and 22.5 ಪ್ರಕಾರ ಸದರಿ

ನಿಯಮಗಳಲ್ಲಿ ಈ ಪ್ರಾಧಿಕಾರಕ್ಕೆ ಪ್ರದತ್ತವಾದ ನೈಸರ್ಗಿಕ ನ್ಯಾಯದ ತತ್ವಗಳ ಆದಾರದ ಮೇರೆಗೆ ಈ ಪ್ರಾಧಿಕಾರವು ತನ್ನ ಮುಂದೆ ಹಾಜರು ಪಡಿಸಲಾದ ಸಂಗತಿ ಮತ್ತು ಸಾಕ್ಷ್ಯವನ್ನು ಆಧರಿಸಿ ಆದೇಶ ಮಾಡಬೇಕಾಗುತ್ತದೆ. ಆದ್ದರಿಂದ ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ದಿನಾಂಕ 04.03.2018ರಿಂದ 14.05.2019ರವರೆಗಿನ ಅವಧಿಗೆ ಮಾತ್ರ ಬಡ್ಡಿಯನ್ನು ಅಪೀಲುದಾರರು ಪಡೆಯಲು ಅರ್ಹರಾಗಿರುತ್ತಾರೆಂದೂ ಅಷ್ಟೇ ಹೊರತು ಪ್ರತಿವಾದಿಯು ತನ್ನ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದು ಅನುಮೋದನೆ ಪಡೆಯುವವರೆಗೂ ಹಾಗೂ ಗ್ರಾಹಕರು ತಾವು ಸಲ್ಲಿಸಬೇಕಾದ ರಸೀದಿ/ಮಾಹಿತಿಯನ್ನು ಸಲ್ಲಿಸುವವರೆಗೂ ಹಾಗೂ ಕೋವಿಡ್–19 ಸಾಂಕ್ರಾಮಿಕ ರೋಗದ ಅವಧಿಯಲ್ಲಿ ಸರ್ಕಾರವು ಕೈಗೊಂಡ ನಿಲುವಿನಿಂದ ಉಂಟಾದ ಕಾಲ ವಿಳಂಬದ ಅವಧಿಯಲ್ಲಿ ಸದರಿ ಪ್ರತಿವಾದಿಯು ನೇರ ಹೊಣೆಗಾರರು ಆಗಿರದೇ ಇರುವುದರಿಂದ ಉಳಿದ ಅವಧಿಗೆ ಶೇಕಡ 1%ರಷ್ಟು ಬಡ್ಡಿಯನ್ನು ಪಡೆಯಲು ಅರ್ಹರಲ್ಲವೆಂದು ತೀರ್ಮಾನಿಸಿ ಅದರಂತೆಯೇ ಒಂದನೇ ಅಂಶಕ್ಕೆ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

16) **<u>ಅಂಶ (ii):</u>** ಮೇಲಿನ 1ನೇ ಅಂಶಕ್ಕೆ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ ಮಾಡಿರುವ ಆದೇಶ.

**ಸಂಖ್ಯೆ: OMB/B/G-425/2021/D-1578** **ದಿನಾಂಕ: 31.08.2021**

## <u>ಆದೇಶ</u>

1. ಅಪೀಲುದಾರರು ಸಲ್ಲಿಸಿದ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.

2. ಅಪೀಲುದಾರರು ದಿನಾಂಕ 04.03.2018ರಿಂದ 14.05.2019ರವರೆಗೆ ಮಾತ್ರ Clause 34.04 of the Conditions of Supply of Electricity of Distributions Licensees in the State of Karnatakaರಲ್ಲಿ ನುಡಿದಂತೆ ಬಡ್ಡಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.

3. ಎರಡನೇ ಎದುರುದಾರರು ಮೇಲ್ಕಂಡಂತೆ ಲೆಕ್ಕಾಚಾರ ಮಾಡಿ ನಿಯಮಾನುಸಾರ ಬಡ್ಡಿ ಮೊತ್ತವನ್ನು ಈ ಆದೇಶವಾದ 4 ವಾರಗಳೊಳಗೆ ಅಪೀಲುದಾರರಿಗೆ ಪಾವತಿಸತಕ್ಕದ್ದು.

ಸಹಿ/–
(ಆರ್. ಶಾರದ)
ವಿದ್ಯುಚ್ಛಕ್ತಿ ಲೋಕಪಾಲರು

<u>**ಪ್ರತಿಯನ್ನು:**</u>

1) ಮೆ। ಯುರೇಖಾ ಫೋರ್ಬ್ಸ್ ಲಿಮಿಟೆಡ್,
ಸಂಖ್ಯೆ 143, ಸಿ–4,
ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ,
ಆಫ್ ಹೊಸೂರ್ ರೋಡ್, ಆನೇಕಲ್ ತಾಲ್ಲೂಕು,
<u>ಬೆಂಗಳೂರು – 560099.</u>

2) ಮೆ। ಶಿವದಾಸ್ ಅಂಡ್ ಶಿವದಾಸ್
(ಲಾ ಚೇಂಬರ್ಸ್), ವಕೀಲರು,
#501, ಲೇವಲ್ 5, ಪ್ರೇಸ್ಟೀಜ್ ಸೇಂಟರ್ ಪಾಂಟ್,
ಸಂಖ್ಯೆ 7, ಕನ್ನಿಂಗ್‌ಹಾಮ್ ರೋಡ್,
<u>ಬೆಂಗಳೂರು – 560052.</u>

3) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ,
ಕಾವೇರಿ ಭವನ, ಕೆ.ಜಿ. ರಸ್ತೆ,
<u>ಬೆಂಗಳೂರು – 560009.</u>

4) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ),
ಕಾರ್ಯ ಮತ್ತು ಪಾಲನ ಚಂದಾಪುರ ಉಪ ವಿಭಾಗ, ಬೆಸ್ಕಾಂ,
ಚಂದಾಪುರ ಪಟ್ಟಣ, <u>ಬೆಂಗಳೂರು – 560099.</u>

5) ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ,
ಪೂರ್ವ ವೃತ್ತ ಕಛೇರಿ, ಬೆಸ್ಕಾಂ,
#232, 6ನೇ ಮುಖ್ಯ ರಸ್ತೆ, 2ನೇ ಬ್ಲಾಕ್,
ಹೆಚ್.ಆರ್.ಬಿ.ಆರ್ ಬಡಾವಣೆ, ಬಾನಸವಾಡಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
<u>ಬೆಂಗಳೂರು – 560051.</u>

6) ಮಾನ್ಯ ಅಧ್ಯಕ್ಷರು, ಕವಿನಿಆ ರವರ ಆಪ್ತ ಕಾರ್ಯದರ್ಶಿ
7) ಮಾನ್ಯ ಸದಸ್ಯರು (M), ಕವಿನಿಆ ರವರ ಆಪ್ತ ಕಾರ್ಯದರ್ಶಿ
8) ಮಾನ್ಯ ಸದಸ್ಯರು (R), ಕವಿನಿಆ ರವರ ಆಪ್ತ ಕಾರ್ಯದರ್ಶಿ
9) ಕಾರ್ಯದರ್ಶಿ, ಕವಿನಿಆ ರವರ ಆಪ್ತ ಸಹಾಯಕರು.